**CW : 22**

PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಷ್ಮ ಭಂಡಾರಿ |
| ತಂದೆಯ ಹೆಸರು | : | ಗೋಪಾಲಕೃಷ್ಣ ಬಂಡಾರಿ |
| ಪ್ರಾಯ | : | 34 ವರ್ಷ |
| ಉದ್ಯೋಗ | | ಪಿ ಎಸ್ ಐ, ಪುತ್ತೂರು ಗ್ರಾಮಾಂತರ ಪೋ ಠಾಣೆ |
| ವಾಸಸ್ಥಳ | : | ಸಂಪ್ಯ, ಪುತ್ತೂರು |

ದಿನಾಂಕ:**17.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಆಗಸ್ಟ್ 2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೋ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.17-04-2025 ರಂದು ಹಗಲು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-20 ರವರು ನನಗೆ ಕರೆಮಾಡಿ ಮಾಡ್ನೂರು ಗ್ರಾಮದಲ್ಲಿ ಇಬ್ರಾಹಿಂ ರವರು ಮರಣ ಹೊಂದಿರುವುದಾಗಿ ಮಾಹಿತಿಯನ್ನು ನೀಡಿದ್ದು ನಾನು ಕೂಡಲೇ ಚಾಸಾ-15 ಹಾಗೂ 21 ರವರನ್ನು ಕರೆದುಕೊಂಡು ತಕ್ಷೀರು ಸ್ಥಳಕ್ಕೆ ಹೋದೆನು. ಅಲ್ಲಿ ಮೃತ ಇಬ್ರಾಹಿಂ ರವರ ಅಣ್ಣ ಚಾಸಾ-1 ರವರು ಆ ದಿನ ಊಟ ಮಾಡಿ ಮಲಗಿದ್ದ ಇಬ್ರಾಹಿಂ ಮೃತರಾಗಿರುವ ಬಗ್ಗೆ ತಿಳಿಸಿದ್ದು ಅವರು ನೀಡಿದ್ದ ಲಿಖಿತ ದೂರನ್ನು ಸ್ವೀಕರಿಸಿದ್ದು ದೂರನ್ನು ಚಾಸಾ-21 ರವರ ಮುಖಾಂತರ ಪ್ರ ವ ವ ಯನ್ನು ದಾಖಲಿಸಲು ಠಾಣೆಗೆ ಕಳುಹಿಸಿರುತ್ತೇನೆ.

ನಂತರ ಪಂಚರಾದ ಚಾಸಾ-9 ರಿಂದ 11 ರವರ ಸಮಕ್ಷಮ ಚಾಸಾ-1 ರವರು ತೋರಿಸಿಕೊಟ್ಟ ಮೃತ ಇಬ್ರಾಹಿಂರವರ ಶವತನಿಖಾ ಮಹಜರನ್ನು ಸಂಜೆ 6.00 ರಿಂದ 7.30 ರ ವರೆಗೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಪುತ್ತೂರು ಸರ್ಕಾರೀ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ.

ನಂತರ ದಿ.2-5-25 ರಂದು ಪುತ್ತೂರು ಸರ್ಕಾರೀ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿದ ಮೃತ ಇಬ್ರಾಹಿಂರವರ ದೇಹದ ವಿಸ್ರಾವನ್ನು ಸ್ವೀಕರಿಸಿ ರಾಸಾಯನಿಕ ವಿಶ್ಲೇಷಣೆಗಾಗಿ ಆರ್ ಎಫ್ ಎಸ್ ಎಲ್ ಮಂಗಳೂರುರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಮೃತ ಇಬ್ರಾಹಿಂ ರವರ ಪಿ ಎಮ್ ವರದಿಯನ್ನು ವೈದ್ಯಾದಿಕಾರಿಯವರಿಂದ ಪಡೆದಿರುತ್ತೇನೆ.

ದಿ 8-5-2025 ರಂದು ಆರ್ ಎಫ್ ಎಸ್ ಎಲ್ ಮಂಗಳೂರುರವರಿಂದ ಬಂದ ವರದಿಯನ್ನು ಸ್ವೀಕರಿಸಿರುತ್ತೇನೆ.

ದಿ.29-5-25 ರಂದು ಮೃತ ವ್ಯಕ್ತಿಯ ಮರಣ ಕಾರಣವನ್ನು ತಿಳಿಯಲು ಪುತ್ತೂರಿನ ಸರ್ಕಾರೀ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆಯನ್ನು ಸಲ್ಲಿಸಿ ಅವರಿಂದ ವರದಿಯನ್ನು ಪಡೆದಿರುತ್ತೇನೆ. ವೈದ್ಯಾಧಿಕಾರಿಗಳು ನೀಡಿದ ವರದಿಯಲ್ಲಿ ಮೃತ ವ್ಯಕ್ತಿಯು ಅಪಘಾತದಿಂದ ಆದ ಗಾಯಗಳಿಂದಲೇ ಸಾವಿಗೀಡಾಗಿರುವುದು ಕಂಡುಬಂದಿರುತ್ತದೆ. ಆದಕಾರಣ ಯು ಡಿ ಆರ್ ಅಂತಿಮ ವರದಿಯನ್ನು 21.6.25 ರಂದು ತಯಾರಿಸಿ ಮಾನ್ಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿ.24.6.25 ರಂದು ಇಬ್ರಾಹಿಂ ರವರ ಸಾವು ಅಪಘಾತದಿಂದ ಆದ ಗಾಯಗಳಿಂದ ಆಗಿದೆ ಎಂದು ಕಂಡುಬಂದ ಕಾರಣ ಕಲಂ 281 ಹಾಗೂ 106 ಬಿಎನಎಸ್ ಕಾಯಿದೆಯಂತೆ ಪರಿವರ್ತಿಸಿ ತನಿಖೆ ಕೈಗೊಳ್ಳಲು ಅನುಮತಿಸುವಂತೆ ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ.

ನಂತರ ಅದೇ ದಿನ ಚಾಸಾ-19 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿ.27-6-25 ರಂದು ಚಾಸಾ-1 ಮತ್ತು ಚಾಸಾ-4 ರವರ ಮುಂದುವರಿದ ಹೇಳಿಕೆ, ಹಾಗೂ ಚಾಸಾ-3, ಮತ್ತು 2 ರವರ ಮರುಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-23 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ಚಾಸಾ-1 ರವರು ನೀಡಿದ ದೂರಿನ ಯಥಾನಕಲನ್ನು ಹಾಗೂ ಯುಡಿಆರ್ ಕ್ರಮಾಂಕ 21-25 ರ ವ್ಯವಹರಣೆಯಲ್ಲಿ ಸಲ್ಲಿಸಿದ ಅಂತಿಮ ವರದಿಯಯಥಾನಕಲನ್ನು ನೋಡಿ ಗುರುತಿಸಿದ್ದು ಅವುಗಳುನ್ನ ಕ್ರಮವಾಗಿ ನಿಪಿ-20 ಮತ್ತು 21 ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-16 ರಿಂದ 19 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-2 ಮತ್ತು 3 ರವರು ನನ್ನ ಸಮಕ್ಷಮ ನಿಪಿ-8 ಮತ್ತು 10 ರಂತೆ ಮುಂದುವರಿದ ಹೇಳಿಕೆಗಳನ್ನು ನೀಡಿರುತ್ತಾರೆ.

<u>ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ</u>

ನಿಪಿ–20 ರಂತೆ ಚಾಸಾ–1 ರವರಿಂದ ದೂರು ಪಡೆದ ನಂತರ ತನಿಖೆ ಕೈಗೊಳ್ಳಲು ನ್ಯಾಯಾಲಯದಿಂದ ವಿಶೇಷ ಅನುಮತಿ ಪಡೆದಿಲ್ಲ. ಚಾಸಾ–1 ರವರು ನಿಪಿ–20 ನ್ನು ನನಗೆ ಕೊಟ್ಟೇ ಇಲ್ಲ ಎಂದರೆ ಸರಿಯಲ್ಲ. ನಾನು ನಿಪಿ–21 ನ್ನು ತಯಾರಿಸಿಯೇ ಇಲ್ಲ ಮತ್ತು ಮೃತ ಇಬ್ರಾಹಿಂರವರ ಶವದ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಡೆದ ಶವ ಪರೀಕ್ಷಾ ವರದಿಯಲ್ಲಿ ಅಪಘಾತ ಸಂಬಂಧಿತವಾಗಿ ಮೃತ ಇಬ್ರಾಹಿಂ ಸತ್ತ ಬಗ್ಗೆ ಅಬಿಪ್ರಾಯ ಇಲ್ಲ ಎಂದರೆ ಸರಿಯಲ್ಲ. ನಿಪಿ–18 ರಲ್ಲಿ ಆ ರೀತಿಯ ಅಬಿಪ್ರಾಯ ಇಲ್ಲದ ಕಾರಣ ನಾನು ಪುತ್ತೂರು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಂದ ನಿಪಿ–17 ದಾಖಲೆ ಪಡೆದಿದ್ದೇನೆ

ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ–1 ರಿಂದ 4 ರವರ ಮರುಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಭವಿತ್ ಕುಮಾರ್ ರವರು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಕೆಳಹಂತದ ಅಧಿಕಾರಿ ಮತ್ತು ಸಿಬ್ಬಂದ ವರ್ಗದವರು ತಯಾರಿಸಿದ ದಾಖಲೆಗಳಿಗೆ ಸಹಿ ಮಾಡಿರಗುವುದನ್ನು ಹೊರತುಪಡಿಸಿ ನಾನು ಯಾವುದೇ ಸ್ವತಂತ್ರ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.